# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1423 (1634)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **19 /12/2025** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ನಿರ್ಮಿಸಲು ಉದ್ದೇಶಿಸಿರುವ ಶ್ರಮಿಕ ವಸತಿ ಶಾಲೆಯ ಉದ್ದೇಶವೇನು; ಎಷ್ಟು ಶಾಲೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ವಿದ್ಯಾಭ್ಯಾಸವು ಮುಖ್ಯ ಪಾತ್ರ ವಹಿಸಲಿದ್ದು, ಕಟ್ಟಡ ಕಾರ್ಮಿಕರು ಕೆಲಸಕ್ಕಾಗಿ ಬೇರೆ ನಗರಗಳು ಅಥವಾ ರಾಜ್ಯಗಳಿಗೆ ವಲಸೆ ಹೋಗಿ ಕಾರ್ಯನಿರ್ವಹಿಸಿ ಜೀವನ ಸಾಗಿಸುತ್ತಿರುವಂತಹ ಮಕ್ಕಳಿಗೆ ಮನೆಯಲ್ಲಿ ಪೋಷಿಸಿ ಉತ್ತಮ ವಿಧ್ಯಾಭ್ಯಾಸವನ್ನು ನೀಡಲು ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಸತಿ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ.<br><br>ರಾಜ್ಯಾದ್ಯಂತ ಒಟ್ಟು 42 ಶಾಲೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಆ) | ಶ್ರಮಿಕ ವಸತಿಶಾಲೆಗಳ ನಿರ್ಮಾಣಕ್ಕೆ ಅಗತ್ಯವಿರುವ ಹಣ ಎಷ್ಟು; ಅಗತ್ಯ ಹಣವನ್ನು ಯಾವ ಮೂಲದಿಂದ ಸಂಗ್ರಹಿಸಲಾಗುವುದು; ಸರ್ಕಾರ ಎಷ್ಟು ಹಣ ನೀಡಿದೆ; | ಶ್ರಮಿಕ ವಸತಿ ಶಾಲೆಗಳ ನಿರ್ಮಾಣಕ್ಕೆ ರೂ.1530.30 ಕೋಟಿಗಳಷ್ಟು ಮೊತ್ತವನ್ನು ನಿಗಧಿಪಡಿಸಲಾಗಿದೆ. ವಸತಿ ಶಾಲೆಗಳನ್ನು ನಿರ್ಮಾಣಕ್ಕೆ ಸಂಪೂರ್ಣ ವೆಚ್ಚವನ್ನು ಮಂಡಳಿಯ ಸುಂಕ ನಿಧಿಯಿಂದ ಭರಿಸಲಾಗುವುದು. |
| ಇ) | ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದು ಯಾವಾಗ; ಟೆಂಡರ್ ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ಯಾವುವು; ಸದರಿ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ; (ವಿವರ ನೀಡುವುದು) | ಮೊದಲನೇ ಹಂತದಲ್ಲಿ 31 ಶ್ರಮಿಕ ವಸತಿ ಶಾಲೆಗಳನ್ನು ನಿರ್ಮಿಸಲು ಕಂದಾಯ ವಿಭಾಗವಾರು 04 ಇ-ಟೆಂಡರ್ ಗಳನ್ನು ದಿ:26-09-2025 ರಂದು ಕರೆಯಲಾಗಿರುತ್ತದೆ. ಇದರಲ್ಲಿ ಮೈಸೂರು ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಮರು ಟೆಂಡರ್ ಕರೆಯಲಾಗಿರುತ್ತದೆ. ಉಳಿದ 03 ಕಂದಾಯ ವಿಭಾಗಗಳ ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| ಈ) | ಟೆಂಡರ್ ಕರೆಯಲು ಮೇಲುಸ್ತುವಾರಿ ಸಮಿತಿ ನೀಡಿದ್ದು ಯಾವಾಗ; ಪ್ಯಾಕೇಜ್ ಟೆಂಡರ್ ಕರೆದು ಹಣಕಾಸು ಇಲಾಖೆಯ ಸೂಚನೆಯನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಕರ್ತರಾದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | 31 ಶ್ರಮಿಕ ವಸತಿ ಶಾಲೆಗಳನ್ನು ನಿರ್ಮಿಸಲು ಸಚಿವ ಸಂಪುಟ ಹಾಗೂ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ವಯ ಪ್ರತಿ ಕಂದಾಯ ವಿಭಾಗವಾರು ಪ್ಯಾಕೇಜ್ ಟೆಂಡರ್ ಕರೆಯಲಾಗಿರುತ್ತದೆ. ದಿನಾಂಕ:24-09-2025 ರಂದು State Level Steering Committee ಯು ಟೆಂಡರ್ ಕರೆಯಲು ಒಪ್ಪಿಗೆ ನೀಡಿರುತ್ತದೆ. ಹಾಗಾಗೀ ಟೆಂಡರ್ ಕರೆಯುವ ಪ್ರಕ್ರಿಯೆಯಲ್ಲಿ ಯಾವುದೇ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ. |

**ಕಾಇ 508 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ
## 42 ಶ್ರಮಿಕ ವಸತಿ ಶಾಲೆಗಳ ಪಟ್ಟಿ

| ಕ್ರ.ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರ/ತಾಲ್ಲೂಕು/ಗ್ರಾಮ |
|---|---|---|
| 1. | ಬೆಂಗಳೂರು ಗ್ರಾಮಾಂತರ | ಹೊಸಕೋಟೆ/ಹೊಸಕೋಟೆ/ ಬೇಗೂರು |
| 2. | ಕೋಲಾರ | ಬಂಗಾರಪೇಟೆ/ಬಂಗಾರಪೇಟೆ/ ಯೆಲೆಸಂದ್ರ |
| 3. | ಚಿತ್ರದುರ್ಗ | ಹಿರಿಯೂರು/ಹಿರಿಯೂರು/ ಹುಲುಗಲಗುಂಟೆ |
| 4. | ತುಮಕೂರು | ಪಾವಗಡ/ಪಾವಗಡ/ಸಿದ್ದಾಪುರ |
| 5. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ/ಬಾಗೇಪಲ್ಲಿ/ ನಾರಾಯಣಸ್ವಾಮಿ ಕೋಟೆ |
| 6. | ಶಿವಮೊಗ್ಗ | ಶಿವಮೊಗ್ಗ ಗ್ರಾಮಾಂತರ/ ಶಿವಮೊಗ್ಗ/ಸಿದ್ದೀಪುರ |
| 7. | ದಾವಣಗೆರೆ | ದಾವಣಗೆರೆ ಉತ್ತರ/ ದಾವಣಗೆರೆ/ತುರುಚಿಘಟ್ಟ |
| 8. | ಬೆಂಗಳೂರು ದಕ್ಷಿಣ | ಕನಕಪುರ/ಕನಕಪುರ |
| 9. | ಬೆಂಗಳೂರು ನಗರ | ಆನೇಕಲ್/ಆನೇಕಲ್ |
| 10. | ಮೈಸೂರು | ವರುಣ/ಮೈಸೂರು/ ಚೋರನಹಳ್ಳಿ |
| 11. | ಚಾಮರಾಜನಗರ | ಚಾಮರಾಜನಗರ/ಚಾಮರಾಜನಗರ/ಯಡಿಯೂರು |
| 12. | ಚಿಕ್ಕಮಗಳೂರು | ಕಡೂರು/ಕಡೂರು/ ಯಲಗೊಂಡನಹಳ್ಳಿ |
| 13. | ಮಂಡ್ಯ | ನಾಗಮಂಗಲ/ನಾಗಮಂಗಲ/ ಬೀರೇಶ್ವರಪುರ |
| 14. | ಹಾಸನ | ಅರಸೀಕೆರೆ/ಅರಸೀಕೆರೆ/ ಹಬ್ಬನಘಟ್ಟ |
| 15. | ಉಡುಪಿ | ಕಾಪು/ಉಡುಪಿ/ಅಂಜಾರು |
| 16. | ದಕ್ಷಿಣ ಕನ್ನಡ | ಪುತ್ತೂರು/ಪುತ್ತೂರು/ಕುರಿಯಾ |
| 17. | ಕೊಡಗು | ಸೋಮವಾರಪೇಟೆ/ಸೋಮವಾರಪೇಟೆ/ಚನ್ನಾಪುರ |
| 18. | ಕಲಬುರ್ಗಿ | ಕಲಬುರ್ಗಿ ಗ್ರಾಮಾಂತರ /ಕಲಬುರ್ಗಿ/ಕಪನೂರು |
| 19. | ಬೀದರ್ | ಬಾಲ್ಕಿ/ಬಾಲ್ಕಿ/ಮಳಚಾಪುರ |
| 20. | ಯಾದಗಿರಿ | ಶಾಹಪುರ/ಶಾಹಪುರ/ ಕಂಚನಕವಿ |
| 21. | ಕೊಪ್ಪಳ | ಯಲಬುರ್ಗ/ಯಲಬುರ್ಗ |
| 22. | ಬಳ್ಳಾರಿ | ಕುರುಗೋಡು/ಕುರುಗೋಡು/ ಕುರುಗೋಡು |
| 23. | ವಿಜಯನಗರ | ಕೂಡಲಗಿ/ಕೂಡಲಗಿ/ಶಿವಪುರ |
| 24. | ರಾಯಚೂರು | ರಾಯಚೂರು/ರಾಯಚೂರು |
| 25. | ಧಾರವಾಡ | ಕಲಘಟಗಿ/ಕಲಘಟಗಿ/ ಹನಮಾಪುರ |
| 26. | ಬೆಳಗಾವಿ | ಕಿತ್ತೂರು/ಕಿತ್ತೂರು/ಕಿತ್ತೂರು |
| 27. | ಬಾಗಲಕೋಟೆ | ಬೀಳಗಿ/ಬೀಳಗಿ/ಸುನಗ |
| 28. | ವಿಜಯಪುರ | ಇಂಡಿ/ಇಂಡಿ/ಹಳಗುಣಕಿ |
| 29. | ಹಾವೇರಿ | ಬ್ಯಾಡಗಿ/ಬ್ಯಾಡಗಿ/ಹಿರೇಅಣಜಿ |
| 30. | ಗದಗ | ರೋಣ/ರೋಣ |
| 31. | ಉತ್ತರ ಕನ್ನಡ | ಭಟ್ಕಳ/ಭಟ್ಕಳ/ಹೆಬಳೆ ಗ್ರಾಮ |
| 32. | ಕೋಲಾರ | ಮಾಲೂರು/ಮಾಲೂರು/ಕೆ.ಜಿ.ಹಳ್ಳಿ |
| 33. | ಚಿತ್ರದುರ್ಗ | ಹೊಸದುರ್ಗ/ಹೊಸದುರ್ಗ/ಮಸನಿಹಳ್ಳಿ |
| 34. | ತುಮಕೂರು | ಕೊರಟಗೆರೆ/ಕೊರಟಗೆರೆ/ಬಿ.ಎಸ್.ಜಿ.ಪಾಳ್ಯ |
| 35. | ದಾವಣಗೆರೆ | ಮಾಯಕೊಂಡ/ದಾವಣಗೆರೆ/ಹೊಸಹಳ್ಳಿ |
| 36. | ಕೊಪ್ಪಳ | ಕಾರಟಗಿ/ಕಾರಟಗಿ/ಎರಡೋಣ |
| 37. | ಬಳ್ಳಾರಿ | ಸಿರಗುಪ್ಪ/ಸಿರಗುಪ್ಪ |
| 38. | ಬೆಳಗಾವಿ | ಅಥಣಿ/ಅಥಣಿ/ಅಥಣಿ |
| 39. | | ರಾಮದುರ್ಗ/ರಾಮದುರ್ಗ/ಒಬಳಾಪುರ |
| 40. | | ಯಮಕನಮರಡಿ/ಹುಕ್ಕೇರಿ/ಕರಗುಪ್ಪಿ |
| 41. | | ಬೈಲಹೊಂಗಲ/ಬೈಲಹೊಂಗಲ/ದೊಡ್ಡವಾಡ |
| 42. | ಉತ್ತರ ಕನ್ನಡ | ಹಳಿಯಾಳ/ದಾಂಡೇಲಿ/ದಾಂಡೇಲಿ |